ಗೃಹಲಕ್ಷ್ಮಿಗೆ ಮೂರು ವರ್ಷದ ಸಂಭ್ರಮ

ಬೆಳಗಾವಿ: ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲೊಂದಾದ ಗೃಹಲಕ್ಷ್ಮಿ ಯೋಜನೆಗೆ ಮೂರು ವರ್ಷಗಳ ಸಂಭ್ರಮದ ಸವಿನೆನಪಿಗಾಗಿ ಬೆಂಗಳೂರಿನ ವಿಧಾನಸೌಧ, ಬೆಳಗಾವಿಯ ಸುವರ್ಣಸೌಧ, ಮೈಸೂರು ಅರಮನೆ, ಚಿತ್ರದುರ್ಗದ ಕಲ್ಲಿನಕೋಟೆ, ಹಂಪಿಯ ಕಲ್ಲಿನರಥ, ಮಂಗಳೂರಿನಲ್ಲಿರುವ ದಕ್ಷಿಣಕನ್ನಡ ಜಿಲ್ಲಾಧಿಕಾರಿ ಕಚೇರಿ ಕಟ್ಟಡ, ಬೆಳಗಾವಿ ಕಿತ್ತೂರು ಚೆನ್ನಮ್ಮ ವೃತ್ತಗಳು ಆ.30ರ ಸಂಜೆ 6ರಿಂದ ರಾತ್ರಿ 10ರವರೆಗೆ ಗುಲಾಬಿ ಬಣ್ಣ(ಪಿಂಕ್ ಲೈಟ್)ದ ಬೆಳಕಿನಲ್ಲಿ ಕಂಗೊಳಿಸಲಿವೆ.

ಸರ್ಕಾರವು ಗೃಹಲಕ್ಷ್ಮೀ ಯೋಜನೆ ಮೂರು ವರ್ಷ ಪೂರೈಸುತ್ತಿರುವ ಈ ಸುಸಂದರ್ಭದಲ್ಲಿ ಮಹಿಳೆಯರ ಹೆಮ್ಮೆಯ ಸಂಕೇತವೆಂದು ಗುರುತಿಸಿರುವ ಗುಲಾಬಿ(ಕಾಬಓಐ) ಬಣ್ಣದ ಬೆಳಕಿನ ವ್ಯವಸ್ಥೆ ಮಾಡಲಾಗಿದೆ. ಇದುವರೆಗೂ ಯೋಜನೆ ಅಡಿ 1.20ಕೋಟಿ ಫಲನುಭವಿಗಳ ಖಾತೆಗೆ 76500ಕೋಟಿಗೂ ಹೆಚ್ಚು ಹಣ ಪಾವತಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪುರಸಭೆ ಕಾರ್ಯಾಲಯ ಬಸವನಬಾಗೇವಾಡಿ
ಜಿಲ್ಲೆ: ವಿಜಯಪುರ ಕರ್ನಾಟಕ ರಾಜ್ಯ
Email Id: itstaff_ulb_basavanabagewadi@yahoo.com
ಕ್ರ.ಸಂ. ಪುಸಬಬಾ/ 214/*/1ಕ ಪ್ರಕಟಣೆ/26–17 ದಿನಾಂಕ: 16–08–2026
: ಸಾರ್ವಜನಿಕ ಪ್ರಕಟಣೆ :
ಬಸವನಬಾಗೇವಾಡಿ ಪುರಸಭೆ ವ್ಯಾಪ್ತಿಯಲ್ಲಿರುವ ಜಮೀನನ್ನು ಕರ್ನಾಟಕ ಪುರಸಭೆಗಳ ಕಾಯ್ದೆ 1964 ಕಲಂ 72 ಹಾಗೂ ಸರ್ಕಾರದ ಆದೇಶ ಸಂಖ್ಯೆ : ನಅಇ 129 ಟಿಎಂಡಿ 2002, ಬೆಂಗಳೂರು, ದಿನಾಂಕ: 02–06–2003ರನ್ವಯ ಆಶ್ರಯ ಸಮಿತಿ ಹಾಗೂ ಆಡಳಿತಾಧಿಕಾರಿಗಳ ಸಭೆಯಲ್ಲಿ ಮೇಲ್ಕಂಡ ಜಮೀನನ್ನು ಜೈನಾಪುರ ಗ್ರಾಮದ ಸರ್ಕಾರಿ ಶಾಲೆಗೆ ನೀಡುವ ಕುರಿತು ಠರಾವು ಅಂಗೀಕರಿಸಿ, ಮುಂದಿನ ಕ್ರಮ ಕೈಗೊಳ್ಳಲು ಅನುಮತಿ ನೀಡಲಾಗಿದೆ.
ಆದ್ದರಿಂದ, ಜೈನಾಪುರ ಗ್ರಾಮದ ಹೊರವಲಯದಲ್ಲಿರುವ ಸರ್ವೆ ನಂ. 214/*/1ಕ, ವಿಸ್ತೀರ್ಣ 2 ಎಕರೆ 00 ಗುಂಟೆ, ಬಸವನಬಾಗೇವಾಡಿ ಪುರಸಭೆಯ ಮುಖ್ಯಾಧಿಕಾರಿಗಳ ಹೆಸರಿನಲ್ಲಿ ಇರುವ ಸದರಿ ಜಮೀನನ್ನು ಜೈನಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಾಗಿ ಶಿಕ್ಷಣ ಇಲಾಖೆಗೆ ಹಸ್ತಾಂತರಿಸುವ ಪ್ರಸ್ತಾವನೆ ಕುರಿತು ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.
ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ, ಸಂಸ್ಥೆ ಅಥವಾ ಸಾರ್ವಜನಿಕರಿಗೆ ಆಕ್ಷೇಪಣೆಗಳಿದ್ದಲ್ಲಿ, ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 (ಹದಿನೈದು) ದಿನಗಳೊಳಗಾಗಿ ತಮ್ಮ ಆಕ್ಷೇಪಣೆಯನ್ನು ಸೂಕ್ತ ದಾಖಲೆಗಳೊಂದಿಗೆ ಬಸವನಬಾಗೇವಾಡಿ ಪುರಸಭೆ ಕಚೇರಿಗೆ ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು. ನಿಗದಿತ ಅವಧಿ ಮುಗಿದ ನಂತರ ಸ್ವೀಕರಿಸಲಾಗುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ.
ಸಹಿ/– ಮುಖ್ಯಾಧಿಕಾರಿಗಳು ಪುರಸಭೆ
ಬಸವನಬಾಗೇವಾಡಿ

ಬೆಳಗಾವಿಯಿಂದ ಭೂಷಣ ಬೋರಸೆ ವರ್ಗಾವಣೆ । 15 ತಿಂಗಳಲ್ಲಿ ಗುರುತರ ಹೆಜ್ಜೆ । ದಟ್ಟಣೆ-ಮೂಲಸೌಕರ್ಯ ಸಮಸ್ಯೆಗೆ ಸಿಗದ ಪರಿಹಾರ

ಪ್ರಯೋಗಗಳ ಹೆಜ್ಜೆ ದಾಖಲಿಸಿದ ಬೋರಸೆ

- ಉಳಿದ ಸವಾಲುಗಳ ದೊಡ್ಡ ಪಟ್ಟಿ
- ಮಾದಕ ವಸ್ತು-ಮಟ್ಕಾ ಪ್ರಕರಣಗಳ ಏರಿಕೆ
- ತಂತ್ರಜ್ಞಾನ, ಜನ ಸಂಪರ್ಕಕ್ಕೆ ಒತ್ತು

ಸಂ.ಕ. ಸಮಾಚಾರ, ಬೆಳಗಾವಿ

ಮಾದಕ ವಸ್ತು ಮಾರಾಟಗಾರರು, ಮಟ್ಕಾ ಬುಕ್ಕಿಗಳು ಮತ್ತು ಜೂಜು ಅಡ್ಡೆಗಳ ವಿರುದ್ಧ ನಿರಂತರ ಕಾರ್ಯಾಚರಣೆ, ರಸ್ತೆಯಲ್ಲಿ ವಾಹನ ನಿಲ್ಲಿಸಿ ದಂಡ ವಿಧಿಸುವ ಪದ್ಧತಿಗೆ ಕಡಿವಾಣ, ಸಂಚಾರ ನಿಯಂತ್ರಣಕ್ಕೆ ಸಿಸಿಟಿವಿ, ಬಾಡಿ ಕ್ಯಾಮೆರಾ ಬಳಕೆ, ಮನೆಬಾಗಿಲಿಗೆ ಪೊಲೀಸರನ್ನು ಕಳುಹಿಸುವ ಬೀಟ್ ವ್ಯವಸ್ಥೆ...!

ಇವು ಪೊಲೀಸ್ ಆಯುಕ್ತ ಭೂಷಣ್ ಗುಲಾಬರಾವ್ ಬೋರಸೆ ಅವರ ಸುಮಾರು 15 ತಿಂಗಳ ಬೆಳಗಾವಿ ಕಾರ್ಯಾವಧಿಯಲ್ಲಿ ಗುರುತಾದ ಪ್ರಮುಖ ಹೆಜ್ಜೆಗಳು.

2025ರ ಮೇ.30ರಂದು ಬೆಳಗಾವಿ ನಗರ ಪೊಲೀಸ್ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡಿದ್ದ ಬೋರಸೆ ಅವರನ್ನು ಡಿಐಜಿ ಹುದ್ದೆಯೊಂದಿಗೆ ಹುಬ್ಬಳ್ಳಿ–ಧಾರವಾಡ ಪೊಲೀಸ್ ಆಯುಕ್ತರನ್ನಾಗಿ ಸರ್ಕಾರ ವರ್ಗಾಯಿಸಿದೆ. ಅವರ ಸ್ಥಾನಕ್ಕೆ ನಿಕ್ಕಂ ಪ್ರಕಾಶ್ ಅಮ್ರಿತ ಅವರನ್ನು ನೇಮಿಸಲಾಗಿದೆ.

ಬೋರಸೆ ಅಧಿಕಾರ ವಹಿಸಿಕೊಂಡಾಗ ನಗರದಲ್ಲಿ ಸಂಚಾರ ಅವ್ಯವಸ್ಥೆ, ಮಾದಕ ವಸ್ತುಗಳ ಮಾರಾಟ, ಮಟ್ಕಾ–ಜೂಜಾಟ ಮತ್ತು ಪೊಲೀಸ್ ಸಿಬ್ಬಂದಿ ಕೊರತೆ ಪ್ರಮುಖ ಸಮಸ್ಯೆಗಳಾಗಿದ್ದವು.

ಆರಂಭಿಕ ದಿನಗಳಿಂದಲೇ ಅಕ್ರಮ ಚಟುವಟಿಕೆಗಳ ವಿರುದ್ಧ ದಾಳಿ ಹೆಚ್ಚಿಸಲಾಯಿತು. ಅದರ ಪರಿಣಾಮ 2024ರಲ್ಲಿ 237ರಷ್ಟಿದ್ದ ಅಕ್ರಮ ಚಟುವಟಿಕೆಗಳಿಗೆ ಸಂಬಂಧಿಸಿದ ಪ್ರಕರಣಗಳು 2025 ರಲ್ಲಿ 461ಕ್ಕೆ ಏರಿದವು. ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಾದ ಪ್ರಕರಣಗಳ ಸಂಖ್ಯೆ 55ರಿಂದ 210ಕ್ಕೆ ತಲುಪಿತು.

ಪ್ರಕರಣಗಳ ಈ ಹೆಚ್ಚಳಕ್ಕೆ ಎರಡು ಮುಖಗಳಿವೆ. ಮಾದಕ ವಸ್ತು ಬಳಕೆ ಮತ್ತು ಮಾರಾಟದ ಸಮಸ್ಯೆ ನಗರದಲ್ಲಿ ಗಂಭೀರವಾಗಿರುವುದನ್ನು ಅಂಕಿ–ಅಂಶಗಳು ಸೂಚಿಸಿದರೆ, ಮತ್ತೊಂದೆಡೆ ಪೊಲೀಸರು ಹಿಂದಿಗಿಂತ ಹೆಚ್ಚು ದಾಳಿ ನಡೆಸಿ ಪ್ರಕರಣ ದಾಖಲಿಸಿದ್ದನ್ನೂ ತೋರಿಸುತ್ತವೆ.

ಸಂಚಾರ ವಿಭಾಗದಲ್ಲಿ ಬೋರಸೆ ಭಿನ್ನ ಪ್ರಯೋಗ ಮಾಡಿದರು. ದಂಡ ವಿಧಿಸುವ ಕೆಲಸದಲ್ಲಿದ್ದ ಶೇ.90ರಷ್ಟು ಸಿಬ್ಬಂದಿಯನ್ನು ರಸ್ತೆಗಳಲ್ಲಿ ಸಂಚಾರ ನಿರ್ವಹಣೆಗೆ ನಿಯೋಜಿಸಲಾಯಿತು. ಸಿಸಿಟಿವಿ, ಬಾಡಿ ಕ್ಯಾಮೆರಾ ಮತ್ತು ಮೊಬೈಲ್‌ನಲ್ಲಿ ಉಲ್ಲಂಘನೆ ದಾಖಲಿಸಿ, ವಾಹನ ಮಾಲಿಕರಿಗೆ ಡಿಜಿಟಲ್ ನೋಟಿಸ್ ಕಳುಹಿಸುವ ವ್ಯವಸ್ಥೆ ಆರಂಭಿಸಲಾಯಿತು. ದಂಡ ವಸೂಲಿಗಿಂತ ಸಂಚಾರ ಸುಗಮಗೊಳಿಸುವುದು ಮುಖ್ಯ ಎಂಬ ನಿಲುವು ಸಾರ್ವಜನಿಕ ವಲಯದಲ್ಲಿ ಗಮನ ಸೆಳೆಯಿತು.

ನಗರಕ್ಕೆ ಪ್ರತಿದಿನ ಬರುವ ಸಾವಿರಾರು ಭಾರಿ ವಾಹನಗಳ ಪ್ರವೇಶಕ್ಕೆ ಸಮಯ ನಿಗದಿ, ಖಾಸಗಿ ಬಸ್‌ಗಳ ನಿಲುಗಡೆಗೆ ಪ್ರತ್ಯೇಕ ಸ್ಥಳ, ಏಕಮುಖ ಸಂಚಾರ, 'ನೋ ಪಾರ್ಕಿಂಗ್' ಪ್ರದೇಶಗಳ ಗುರುತು ಮತ್ತು ಬ್ಯಾರಿಕೇಡ್ ಅಳವಡಿಕೆಯಂತಹ ಕ್ರಮಗಳನ್ನೂ ಕೈಗೊಳ್ಳಲಾಯಿತು.

ಆದರೂ ಕೇಂದ್ರ ಬಸ್ ನಿಲ್ದಾಣ, ಖಡೇಬಜಾರ್, ಮಾರುತಿ ಗಲ್ಲಿ, ಚನ್ನಮ್ಮ ವೃತ್ತ ಮತ್ತು ಹಳೆಯ ನಗರ ಭಾಗದ ಸಂಚಾರ ದಟ್ಟಣೆ ಸಂಪೂರ್ಣ ತಗ್ಗಲಿಲ್ಲ. ರಸ್ತೆ ಗುಂಡಿ, ಪಾರ್ಕಿಂಗ್ ಕೊರತೆ, ಕಿರಿದಾದ ರಸ್ತೆಗಳು ಹಾಗೂ ಪಾಲಿಕೆ–ಲೋಕೋಪಯೋಗಿ–ಹೆದ್ದಾರಿ ಪ್ರಾಧಿಕಾರದ ನಡುವಿನ ಸಮನ್ವಯದ ಸಮಸ್ಯೆ ಪೊಲೀಸ್ ಕ್ರಮಗಳಿಗೂ ಮಿತಿ ಹಾಕಿತು.

ಬೆಳಗಾವಿಗೆ ನಿಕ್ಕಂ ಪ್ರಕಾಶ್ ಅಮ್ರಿತ್

ಕೇಂದ್ರ ನಿಯೋಜನೆಯಲ್ಲಿದ್ದ 2012ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ನಿಕ್ಕಂ ಪ್ರಕಾಶ್ ಅಮ್ರಿತ್ ಅವರನ್ನು ಬೆಳಗಾವಿ ನಗರ ಪೊಲೀಸ್ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಮಹಾರಾಷ್ಟ್ರ ಮೂಲದ ನಿಕ್ಕಂ ಅವರು ಎಂಜಿನಿಯರಿಂಗ್ ಪದವೀಧರರು. 2012ರ ಡಿಸೆಂಬರ್ 24ರಂದು ಭಾರತೀಯ ಪೊಲೀಸ್ ಸೇವೆಗೆ ಸೇರ್ಪಡೆಯಾದ ಅವರು ಕರ್ನಾಟಕ ಕೇಡರ್‌ನಲ್ಲಿ ಸೇವೆ ಆರಂಭಿಸಿದರು. ಜಿಲ್ಲಾ ಪೊಲೀಸ್ ಆಡಳಿತ, ಅಪರಾಧ ತನಿಖೆ, ನಕ್ಸಲ್ ನಿಗ್ರಹ ಹಾಗೂ ವಿಮಾನ ನಿಲ್ದಾಣಗಳ ಭದ್ರತೆಯಂತಹ ವಿಭಿನ್ನ ವಿಭಾಗಗಳಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ.

ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ 9ನೇ ಬೆಟಾಲಿಯನ್‌ನ ಕಮಾಂಡೆಂಟ್ ಆಗಿದ್ದ ಅವರನ್ನು 2018ರ ಮಾರ್ಚ್‌ನಲ್ಲಿ ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಿಸಲಾಗಿತ್ತು. ಕೋಮುಸೂಕ್ಷ್ಮ ಪ್ರದೇಶಗಳಲ್ಲಿ ಕಾನೂನು–ಸುವ್ಯವಸ್ಥೆ ನಿರ್ವಹಣೆ, ಸಂಘಟಿತ ಅಪರಾಧಗಳ ನಿಯಂತ್ರಣ ಹಾಗೂ ಅಪರಾಧ ಪ್ರಕರಣಗಳ ತನಿಖೆಯ ಹೊಣೆ ನಿಭಾಯಿಸಿದ್ದರು.

ನಂತರ ಬೆಂಗಳೂರಿನ ಅಪರಾಧ ತನಿಖಾ ದಳದಲ್ಲಿ ಎಸ್‌ಪಿಯಾಗಿ ಕೆಲಸ ಮಾಡಿದರು. 2020ರ ಆಗಸ್ಟ್‌ನಲ್ಲಿ ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ವರ್ಗಾವಣೆಗೊಂಡರು.

2021ರ ಅಕ್ಟೋಬರ್‌ನಲ್ಲಿ ಉಡುಪಿ ಜಿಲ್ಲೆಯ ಕಾರ್ಕಳದಲ್ಲಿರುವ ನಕ್ಸಲ್ ನಿಗ್ರಹ ಪಡೆಯ ಎಸ್‌ಪಿ ಹುದ್ದೆ ವಹಿಸಿಕೊಂಡರು. ಪಶ್ಚಿಮಘಟ್ಟ ವ್ಯಾಪ್ತಿಯ ನಕ್ಸಲ್ ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ಆಂತರಿಕ ಭದ್ರತಾ ಕಾರ್ಯಾಚರಣೆಗಳ ಅನುಭವವೂ ಅವರಿಗಿದೆ.

2026ರ ಜನವರಿ 1ರಿಂದ ಡಿಐಜಿ ದರ್ಜೆಗೆ ಬಡ್ತಿ ಪಡೆದಿರುವ ನಿಕ್ಕಂ ಅವರಿಗೆ ಈಗ ಗಡಿ, ಭಾಷೆ ಮತ್ತು ರಾಜಕೀಯ ಸೂಕ್ಷ್ಮತೆ ಹೊಂದಿರುವ ಬೆಳಗಾವಿ ನಗರದ ಪೊಲೀಸ್ ಆಡಳಿತದ ಜವಾಬ್ದಾರಿ ಸಿಕ್ಕಿದೆ.

55 ಬೀಟ್‌ಗಳ ಮೂಲಕ 'ಮನೆ-ಮನೆಗೆ ಪೊಲೀಸ್' ಕಾರ್ಯಕ್ರಮ, ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗೆ ವಿಶೇಷ ಗಮನ ಹಾಗೂ ನಾಗರಿಕರು ನೇರವಾಗಿ ಆಯುಕ್ತರಿಗೆ ಸಲಹೆ ನೀಡುವ ವ್ಯವಸ್ಥೆ ಅವರ ಅವಧಿಯ ಜನಸಂಪರ್ಕ ಬೋರಸೆ ಅವರ ಪ್ರಯತ್ನಗಳಾದವು.

ಕೆಎಲ್‌ಎಸ್ ಜಿಐಟಿ ಪ್ರಾಚಾರ್ಯ ಡಾ.ವಿಜಯ ಅಥವಲೆ ಅವರು ಪ್ರಶಸ್ತಿ ಸ್ವೀಕರಿಸಿದರು.

ಕೆಎಲ್‌ಎಸ್ ಜಿಐಟಿಗೆ ಪ್ರಶಸ್ತಿ ಪ್ರದಾನ

ಬೆಳಗಾವಿ: ಬೆಳಗಾವಿಯ ಕರ್ನಾಟಕ ಲಾ ಸೊಸೈಟಿಯ ಗೋಗಟೆ ತಾಂತ್ರಿಕ ಸಂಸ್ಥೆ(ಕೆಎಲ್‌ಎಸ್ ಜಿಐಟಿ)ಗೆ ಬೆಂಗಳೂರಿನಲ್ಲಿ ನಡೆದ ಎಫ್‌ಕೆಸಿಸಿಐ ಇನ್ಸ್ಟಿಟ್ಯೂಶನ್ ಲೀಡರ್ಸ್ ಕಾನ್‌ಫ್ಲೂಯನ್ಸ್–2026 ಕಾರ್ಯಕ್ರಮದಲ್ಲಿ 'ಎಕ್ಸಲೆನ್ಸಿ ಇನ್ ಸ್ಕಿಲ್ ಡೆವಲೆಪ್‌ಮೆಂಟ್ ಅವಾರ್ಡ್' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೆಎಲ್‌ಎಸ್ ಜಿಐಟಿ ಪ್ರಾಚಾರ್ಯ ಡಾ.ವಿಜಯ ಅಥವಲೆ ಅವರು ಪ್ರಶಸ್ತಿ ಸ್ವೀಕರಿಸಿದರು. ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಸಿಎ ಎಫ್.ಆರ್. ಸಿಂಘ್ವಿ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ, ಡಾ.ಅಜಯ್ ಸಿಂಗ್, ಕರ್ನಾಟಕ ಕೌಶಲ್ಯಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಇ.ವಿ. ರಾಮಣ ರೆಡ್ಡಿ ಉಪಸ್ಥಿತರಿದ್ದರು. ದಿನಪೂರ್ತಿ ನಡೆದ ಕಾರ್ಯಕ್ರಮದಲ್ಲಿ ಕೈಗಾರಿಕಾ ನಾಯಕರು, ಉನ್ನತ ಶಿಕ್ಷಣ ಸಂಸ್ಥೆಗಳು, ನೀತಿ ರೂಪಿಸುವವರು, ಸೆಕ್ಟರ್ ಸ್ಕಿಲ್ ಕೌನ್ಸಿಲ್‌ಗಳು, ಕಾನ್ಸುಲೇಟ್‌ಗಳು, ವಾಣಿಜ್ಯ ಪ್ರತಿನಿಧಿಗಳು ಹಾಗೂ ಜಾಗತಿಕ ವಾಣಿಜ್ಯ ಮಂಡಳಿಗಳ ಜಾಲವು ಸೇರಿಕೊಂಡು ಕೌಶಲ್ಯಾಭಿವೃದ್ಧಿ, ಉದ್ಯೋಗಾರ್ಹತೆ ಮತ್ತು ಕಾರ್ಮಿಕ ಪರಿವರ್ತನೆ ಕುರಿತು ಚರ್ಚೆ ನಡೆಸಿದರು.

ಈ ಗೌರವವು ಕೆಎಲ್‌ಎಸ್ ಜಿಐಟಿಯ ಕೌಶಲ್ಯಾಧಾರಿತ ಶಿಕ್ಷಣದ ನಿರಂತರ ಬದ್ಧತೆ ಹಾಗೂ ಉದ್ಯಮೋನ್ಮುಖ ಕಾರ್ಮಿಕ ಶಕ್ತಿ ರೂಪಿಸುವಲ್ಲಿ ಸಂಸ್ಥೆಯ ಪಾತ್ರವನ್ನು ಮತ್ತೊಮ್ಮೆ ದೃಢಪಡಿಸುತ್ತದೆ. ಸಂಸ್ಥೆಯು ಕಳೆದ 47 ವರ್ಷಗಳ ಶ್ರೇಷ್ಠತೆಯ ಪರಂಪರೆ ಮುಂದುವರಿಸುತ್ತಿದೆ.

ಸುಟ್ಟಟ್ಟಿ ಗ್ರಾಮದಲ್ಲಿ ಆಯೋಜಿಸಿದ್ದ ನಿಲಜಿ ಕೇಂದ್ರ ಮಟ್ಟದ ಪ್ರಾಥಮಿಕ ವಿಭಾಗದ ಕ್ರೀಡಾಕೂಟಕ್ಕೆ ಸಿಆರ್‌ಪಿ ಪಿ.ಎಸ್. ಕಾಂಬಳೆ ಚಾಲನೆ ನೀಡಿದರು.

ಸದೃಢ ಆರೋಗ್ಯಕ್ಕೆ ಕ್ರೀಡೆ ಸಹಕಾರಿ

ಕುಡಚಿ : ಸೋಲು ಗೆಲುವು ಲೆಕ್ಕ ಹಾಕಬೇಡಿ. ಮೊದಲು ಕ್ರೀಡಾ ಕೂಟಗಳಲ್ಲಿ ಭಾಗವಹಿಸಿ ತಮ್ಮಲ್ಲಿರುವ ಕ್ರೀಡಾ ಪ್ರತಿಭೆ ಪ್ರದರ್ಶಿಸಬೇಕೆಂದು ಶಿಕ್ಷಣ ಇಲಾಖೆಯ ಸಿಆರ್‌ಪಿ ಪಿ.ಎಸ್. ಕಾಂಬಳೆ ಹೇಳಿದರು.

ಸುಟ್ಟಟ್ಟಿ ಗ್ರಾಮದ ಪ್ರೌಢ ಶಾಲೆಯ ಆವರಣದಲ್ಲಿ ಆಯೋಜಿಸಿದ್ದ ನಿಲಜಿ ಕೇಂದ್ರ ಮಟ್ಟದ ಪ್ರಾಥಮಿಕ ವಿಭಾಗದ, ಶಾಲಾ ಕ್ರೀಡಾಕೂಟ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮನುಷ್ಯ ಸದೃಢ ಆರೋಗ್ಯ ಹೊಂದಲು ಕ್ರೀಡೆ ಸಹಕಾರಿಯಾಗುತ್ತದೆ. ಮಾನಸಿಕವಾಗಿ ಸದೃಢರಾಗಲು ಸಾಧ್ಯವಾಗುತ್ತದೆ ಎಂದರು. ಕ್ರೀಡಾಕೂಟದಲ್ಲಿ ಪ್ರಾಥಮಿಕ ವಿಭಾಗದ 8 ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ತಾಪಂ ಮಾಜಿ ಉಪಾಧ್ಯಕ್ಷ ಮುರಾರಿ ಬಾನೆ, ಸಿಆರ್‌ಪಿ ಪಿ.ಎಸ್. ಕಾಂಬಳೆ, ಪರುಶುರಾಮ ಕೋಳಿಕರ, ಲಕ್ಷ್ಮಣ ಖೋತ, ಐ.ಆರ್. ನದಾಫ್, ಎಸ್.ಐ. ಪಾಟೀಲ, ಮಾರುತಿ ಖೋತ, ಪ್ರಕಾಶ ಖಿದ್ರಾಪುರೆ, ಝಡ್.ಆರ್. ಮುಲ್ಲಾ, ಮಾಯಪ್ಪ ಹಟ್ಟಿಮನಿ ಇತರರಿದ್ದರು.

ಅವಧಿ ವಿಸ್ತರಣೆ

ಬೆಳಗಾವಿ: ಹಿರಿಯ ನಾಗರಿಕರ ದಿನಾಚರಣೆ–2026ರ ಅಂಗವಾಗಿ ಹಿರಿಯ ನಾಗರಿಕರ ವೈಯಕ್ತಿಕ ಹಾಗೂ ಸಂಸ್ಥೆಯ ರಾಜ್ಯ ಪ್ರಶಸ್ತಿಗಾಗಿ ಆಹ್ವಾನಿಸಲಾದ ಅರ್ಜಿಗಳ ದಿನಾಂಕ ವಿಸ್ತರಿಸಲಾಗಿದೆ.

ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ನಮೂನೆಗಾಗಿ ವೆಬ್‌ಸೈಟ್ ವಿಳಾಸ : www.dwdsc.kar.nic.in <http://www.dwdsc.kar.nic.in>ನ್ನು / ಕಛೇರಿ ದೂರವಾಣಿ ಸಂಖ್ಯೆ: 0831–2476096 ಗೆ ಅಥವಾ ಆಯಾ ತಾಲೂಕು ಪಂಚಾಯತಿ ಕಛೇರಿಯಲ್ಲಿರುವ ಎಂ.ಆರ್.ಡಬ್ಲ್ಯೂ. ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ ಲಿಮಿಟೆಡ್, ಜಮಖಂಡಿ
ತಾ|| ಜಮಖಂಡಿ ಜಿ|| ಬಾಗಲಕೋಟೆ
ಪ್ರಕಟಣೆ
ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ಹ್ ಬ್ಯಾಂಕ ಲಿಮಿಟೆಡ್, ಜಮಖಂಡಿ ಇದರ ಸನ್ 2025-26ನೇ ಸಾಲಿನ 86ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಶನಿವಾರ ದಿನಾಂಕ 05/09/2026 ರಂದು ಮುಂಜಾನೆ 11:00 ಘಂಟೆಗೆ "ಬಸವ ಭವನ" ಬಸಸ್ಟ್ಯಾಂಡ್ ರೋಡ, ಜಮಖಂಡಿಯಲ್ಲಿ ಕರೆಯಲಾಗಿದೆ. ಕಾರಣಾಂತರಗಳಿಂದ ಸಭೆಯ ನೋಟಿಸು ತಲುಪದೇ ಇದ್ದಲ್ಲಿ ಇದನ್ನೇ ಸಭೆಯ ನೋಟಿಸ್ ಎಂದು ಪರಿಗಣಿಸಿ ಸಭೆಗೆ ಹಾಜರಾಗಲು ಕೋರಲಾಗಿದೆ. ಕಾರಣ ಎಲ್ಲ ಸಾಮಾನ್ಯ ಸದಸ್ಯರು ಸಮಯಕ್ಕೆ ಸರಿಯಾಗಿ ಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.
ಸ್ಥಳ: ಜಮಖಂಡಿ ಸಹಿ/- ಅಧ್ಯಕ್ಷರು
ದಿ: 27/08/2026 ಶ್ರೀ ರಾಹುಲ ಎಸ್. ಕಲೂತಿ

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ.: UBL/SG/CN/191/SLU-MVY-EI-03 ದಿನಾಂಕ: 25.08.2026
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಉಪ ಕಾಮಗಾರಿ–I: ಚಿಕ್ಕಜಾಜೂರು – ಹರಿಹರ ವಿಭಾಗದಲ್ಲಿ ಎರಡು ಹೆಚ್ಚುವರಿ ಗೂಡ್ಸ್ ಮತ್ತು ಸ್ಟಾಬ್ಲಿಂಗ್ ಲೈನ್‌ಗಳೊಂದಿಗೆ ಫ್ಲೈಟ್ ಟರ್ಮಿನಲ್ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸ